File No. AGRI-ACT/28/2019-AGRI_PLAN_A-AGRICULTURE Secretariat

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೀಜ ಹಾನಿ ನಿಧಿ ಯೋಜನೆಯಡಿ ಸರ್ಕಾರಿ ಸೌಮ್ಯಗಳ ಸಂಸ್ಥೆಗಳು ಹಾಗೂ ಕೃಷಿ ವಿಶ್ವವಿದ್ಯಾಲಯವು ಉತ್ಪಾದಿಸಿರುವ ಬಿತ್ತನೆ ಬೀಜಗಳು ವಿಲೇವಾರಿ ಯಾಗದೇ ಉಳಿಕೆಯಾಗಿ ಆರ್ಥಿಕ ನಷ್ಟ ಸಂಭವಿಸಿರುವ ಕುರಿತು ಅನುದಾನ ಒದಗಿಸುವ ಬಗ್ಗೆ.

ಓದಲಾಗಿದೆ: ಕೃಷಿ ಆಯುಕ್ತರವರ ಪ್ರಸ್ತಾವನೆ ಸಂ.SFS-7/ಬೀ.ಹಾನಿ/2/2018-19.
ದಿನಾಂಕ:11.06.2019.

**ಪ್ರಸ್ತಾವನೆ:**

ಮೇಲೆ ಓದಲಾದ ಕೃಷಿ ಆಯುಕ್ತರ ಪ್ರಸ್ತಾವನೆಯಲ್ಲಿ, 2016-17ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಸೌಮ್ಯ ಸಂಸ್ಥೆಗಳು ಹಾಗೂ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು/ ಧಾರವಾಡ/ ರಾಯಚೂರು ಇವರು ರೈತರಿಗೆ ಬೇಕಾಗುವ ಬಿತ್ತನೆ ಬೀಜಗಳನ್ನು ಉತ್ಪಾದಿಸಿ ಇಲಾಖೆಗೆ ಸರಬರಾಜು ಮಾಡಿರುವುದಾಗಿ ಹಾಗೂ ಕೆಲವು ಸಂದರ್ಭಗಳಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಅಥವಾ ಬೆಳೆ ಪರಿವರ್ತನೆಯಿಂದಾಗಿ ಅಥವಾ ಇತರ ಕಾರಣಗಳಿಂದಾಗಿ ಉತ್ಪಾದಿಸಿರುವ ಬಿತ್ತನೆ ಬೀಜಗಳು ಪೂರ್ಣಪ್ರಮಾಣದಲ್ಲಿ ವಿಲೇವಾರಿಯಾಗದೇ ಉಳಿಕೆಯಾಗಿ ಆರ್ಥಿಕ ನಷ್ಟ ಸಂಭವಿಸಿರುತ್ತದೆ. ಈ ಸಂಬಂಧ, ದಿನಾಂಕ: 28.02.2019 ರಂದು ಅಪರ ಕೃಷಿ ನಿರ್ದೇಶಕರು (ಸಾವಯವ ಕೃಷಿ) ಇವರ ಅಧ್ಯಕ್ಷತೆಯಲ್ಲಿ ನಡೆದ ಬೀಜ ಹಾನಿ ನಿಧಿ ಯೋಜನೆಯಡಿ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ, ಬೆಂಗಳೂರು, ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತ, ಹುಬ್ಬಳ್ಳಿ ಮತ್ತು ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ ಇವರ ಪ್ರಸ್ತಾವನೆಗಳು ಬೀಜ ಹಾನಿ ನಿಧಿ ಮಾರ್ಗಸೂಚಿಯಡಿಯಲ್ಲಿ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಡದೇ ಇರುವುದರಿಂದ ಪರಿಗಣಿಸಿರುವುದಿಲ್ಲ ಹಾಗೂ 2018-19ನೇ ಸಾಲಿನಲ್ಲಿ ಬೀಜ ಹಾನಿ ನಿಧಿ ಯೋಜನೆಯಡಿ ಪರಿಗಣಿಸಬಹುದಾದ ಅರ್ಹ ಮೊತ್ತ ಮತ್ತು ಬಿತ್ತನೆ ಬೀಜದ ಪ್ರಮಾಣದ ಮೊತ್ತದ ವಿವರಗಳು ಕೆಳಕಂಡಂತಿದೆ.

| ಕ್ರ. ಸಂ | ಸಂಸ್ಥೆಗಳು | ಕೃಷಿ ಇಲಾಖೆಯಿಂದ ನೀಡಲಾದ ಬೇಡಿಕೆ (ಕ್ವಿಂ) | ಉತ್ಪಾದನೆ/ ಖರೀದಿಸಿದ ಪ್ರಮಾಣ (ಕ್ವಿಂ) | ಬಿತ್ತನೆ ಬೀಜ ಉದ್ದೇಶಕ್ಕಾಗಿ ಮಾರಾಟ ಮಾಡಿದ ಪ್ರಮಾಣ (ಕ್ವಿಂ) | ಬೀಜೇತರ ಉದ್ದೇಶಕ್ಕೆ ಮಾರಾಟ ಮಾಡಿದ ಪ್ರಮಾಣ (ಕ್ವಿಂ) | ಪರಿಗಣಿಸಬಹುದಾದ ಅರ್ಹ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|---|---|
| 1 | ಕರ್ನಾಟಕ ರಾಜ್ಯ ಬೀಜ ನಿಗಮ | 278600 | 219704 | 191275.13 | 28428.87 | 828.31 |
| 2 | ಕೃಷಿ ವಿಶ್ವವಿದ್ಯಾಲಯ, ರಾಯಚೂರು. | 1500 | 1745.45 | 901.30 | 598.70 | 30.32 |
| | ಒಟ್ಟು | **280100** | **221449.45** | **192176.43** | **29027.57** | **858.63** |

2019-20ನೇ ಸಾಲಿಗೆ ಬೀಜ ಹಾನಿ ನಿಧಿ GIA to KSSC & KSSOCA ಯೋಜನೆಯ ಲೆಕ್ಕ ಶೀರ್ಷಿಕೆ: 2401-00-103-0-15 (103) ರಡಿಯಲ್ಲಿ ಮೊದಲನೇ ತ್ರೈಮಾಸಿಕದಲ್ಲಿ ರೂ.7.00 ಕೋಟಿ ಅನುದಾನವು ಬಿಡುಗಡೆಯಾಗಿದ್ದು, ಅದರಲ್ಲಿ ರೂ.2.00 ಕೋಟಿ ಅನುದಾನವನ್ನು KSSOCA ಸಂಸ್ಥೆಗೆ ಒದಗಿಸಲಾಗಿದೆ. ಇನ್ನುಳಿದ ರೂ.5.00 ಕೋಟಿ ಅನುದಾನವನ್ನು ಬೀಜ ಹಾನಿ ನಿಧಿ ಯೋಜನೆಗೆ ಲಭ್ಯವಿದೆ. ಸದರಿ ಅರ್ಹ ಮೊತ್ತ ರೂ. 858.63 ಲಕ್ಷಗಳನ್ನು ಲಭ್ಯವಿರುವ ಅನುದಾನದಲ್ಲಿ ಹಾಗೂ 2ನೇ ತ್ರೈಮಾಸಿಕ ಅನುದಾನದಲ್ಲಿ ಭರಿಸಬಹುದಾಗಿರುತ್ತದೆ. ಈ ಬಗ್ಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, 2019-20ನೇ ಸಾಲಿನ ರಾಜ್ಯ ಬೀಜ ಹಾನಿ ನಿಧಿ ಲೆಕ್ಕ ಶೀರ್ಷಿಕೆ:2401-00-103-0-15(103)ರಡಿ ಒದಗಿಸಿರುವ ಅನುದಾನದ ಮೊದಲನೇ ತ್ರೈಮಾಸಿಕದಲ್ಲಿ ಬಿಡುಗಡೆಯಾದ ರೂ.7.00 ಕೋಟಿ ಅನುದಾನದಲ್ಲಿ ಹಾಲಿ ಲಭ್ಯವಿರುವ ರೂ.5.00 ಕೋಟಿ ಅನುದಾನವನ್ನು, ದಿನಾಂಕ: 28.02.2019 ರಂದು ಅಪರ ಕೃಷಿ ನಿರ್ದೇಶಕರು (ಸಾವಯವ ಕೃಷಿ) ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪರಿಗಣಿಸಲಾದ ಪ್ರಸ್ತಾವನೆಗಳಿಗೆ ಮಾತ್ರ ಬೀಜ ಹಾನಿ ನಿಧಿ ಮಾರ್ಗಸೂಚಿಯಲ್ಲಿ ಬರುವ ಷರತ್ತು ಮತ್ತು ನಿಬಂಧನೆಗಳಡಿ ಬಳಸಿಕೊಳ್ಳುವ ಷರತ್ತಿಗೊಳಪಟ್ಟು ಲೆಕ್ಕ ಶೀರ್ಷಿಕೆ:2401-00-103-0-15(103)ರಡಿ ಭರಿಸಲು ಅನುಮೋದನೆಯನ್ನು ನೀಡಲು ತೀರ್ಮಾನಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: AGRI-ACT/28/2019, ಬೆಂಗಳೂರು, ದಿನಾಂಕ:01.07.2019</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, 2019-20ನೇ ಸಾಲಿನಲ್ಲಿ ರಾಜ್ಯ ಬೀಜ ಹಾನಿ ನಿಧಿ ಲೆಕ್ಕ ಶೀರ್ಷಿಕೆ:2401-00-103-0-15(103)ರಡಿ ಒದಗಿಸಿರುವ ಅನುದಾನದ ಮೊದಲನೇ ತ್ರೈಮಾಸಿಕದಲ್ಲಿ ಬಿಡುಗಡೆಯಾದ ರೂ.7.00 ಕೋಟಿ ಅನುದಾನದಲ್ಲಿ ಹಾಲಿ ಲಭ್ಯವಿರುವ ರೂ. 5.00 ಕೋಟಿಗಳನ್ನು ಬೀಜ ಹಾನಿ ನಿಧಿ ಮಾರ್ಗಸೂಚಿಯಡಿ ಬರುವ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಕರ್ನಾಟಕ ರಾಜ್ಯ ಬೀಜ ನಿಗಮ ಮತ್ತು ಕೃಷಿ ವಿಶ್ವವಿದ್ಯಾಲಯ ರಾಯಚೂರು ಇವರುಗಳಿಗೆ ಬಿಡುಗಡೆ ಮಾಡಲು ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಕೃಇ 13 ಆಂಆಸ 2019, ದಿನಾಂಕ:24.06.2019ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

**<u>ಇವರಿಗೆ:-</u>**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.
2. ಪ್ರಧಾನ ಮಹಾಲೇಖಪಾಲರು (ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.
3. ಪ್ರಧಾನ ಮಹಾಲೇಖಪಾಲರು (ಜಿ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
4. ಆಯುಕ್ತರು / ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ , ಬೆಂಗಳೂರು.
7. ಅಪರ ಕೃಷಿ ನಿರ್ದೇಶಕರು, (ಸಾವಯವ ಕೃಷಿ) ಕೃಷಿ ಆಯುಕ್ತಾಲಯ.
8. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ-4)
9. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು.
10. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿ-1 & 2ರವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ
13. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.